‘ಲಾಯರ್‌ಗೆ ಗುರುವಾರ ಆಗಲ್ಲ ಅನ್ನು, ನಾನು ಊರಲ್ಲಿ ಇರೋದಿಲ್ಲ’ ಪ್ರಶಾಂತನ ಮೆಸೇಜ್.

‘ಏನೇ ಗಂಡ-ಹೆಂಡತಿರು ಚಾಟ್ ಮಾಡ್ತಾ ಇದೀರಾ... ಏನಂತೆ ನಿನ್ನ ಗಂಡನದ್ದು? ಏನಾದ್ರೂ ಹೊರಗೆ ಹೋಗೋ ಪ್ಲಾನಾ?’ ಅಕ್ಕ ಮತ್ತೊಮ್ಮೆ ಇರಿದಳು.

ಇಷ್ಟು ಹತ್ತಿರದ ಬಂಧುಗಳು ಹೇಗಿದ್ದೀ ಎಂದು ಅವರು ಕೇಳೋದಿಲ್ಲ, ಹೀಗಿದ್ದೇನೆ ಎಂದು ನಾನು ಹೇಳೋಕಾಗೋದಿಲ್ಲ ಎಂದು ವಿಷಾದದ ನಗು ಮೂಡಿಸುತ್ತಲೇ ‘ಓಕೆ’ ಎಂದು ಪ್ರಿಯಾ ರಿಪ್ಲೈ ಮಾಡಿದ್ದಳು.

ನೆಂಟರಿಷ್ಟರ ಮುಂದೆ ಸುಳ್ಳು ಹೇಳುತ್ತಾ ಕೂರುವುದರಷ್ಟು ಸುಸ್ತಾಗೋದು ಏನೂ ಇಲ್ಲ ಬಿಡು ಅಂದುಕೊಳ್ಳುತ್ತಾ ಹೊರಟವಳು ಮನೆ ಸೇರುವಾಗ ಒಂಬತ್ತಾಗಿತ್ತು. ಮೆಟ್ಟಿಲು ಹತ್ತುವಾಗಲೇ ಒಳಗಿಂದ ಶಬ್ದ ಕೇಳುತ್ತಿತ್ತು. ಬ್ಯಾಗಿಂದ ಕೀ ತೆಗೆದು ಬಾಗಿಲು ತೆಗೆದ ಕೂಡಲೇ ಮೈಮೇಲೆ ಎಗರಿ ಮುದ್ದಿಸಿದ್ದಳು ಸ್ನೂಪಿ. ಮೂರು ತಿಂಗಳ ಸೈಬೀರಿಯನ್ ಹಸ್ಕೀ ಮರಿ.

* * *

ಆಫೀಸಲ್ಲಿ ಹೆಚ್ಚಿದ ಕೆಲಸ, ಲಾಯರ್‌ಗೆ ದುಡ್ಡು ಹೊಂದಿಸುವ ಒತ್ತಡ, ಮನೆಯ ಒಂದಿಷ್ಟು ಕಿರಿಕಿರಿಗಳ ನಡುವೆ ಬಂದ ನಾಯಿ ಸ್ನೂಪಿ. ಎಂಥಾ ತಲೆ ಹೋಗೋ ಜಗಳದ ನಡುವೆಯೂ ಪ್ರಶಾಂತ್ ನಾಯಿಮರಿ ತರ್ತಾ ಇದೀನಿ ಅಂದಾಗ ಇಲ್ಲವೆನ್ನಲಾಗಿರಲಿಲ್ಲ ಅವಳಿಗೆ. ಬೇಡ ಎನ್ನುವ ಜೊತೆಗೆ, ನಾಯಿಮರಿ ಇದ್ದರೆ ಚೆನ್ನಾಗಿರುತ್ತೆ ಅನ್ನೋ ಮುಗ್ಧತೆಯೂ ಸಿಲುಕಿ ಹೂಂ ಅಂದಿದ್ದಳು. ಬಂದ ವಾರದಲ್ಲೇ ಸಾಕಾಗಿತ್ತು ಪ್ರಿಯಾಗೆ. ಇನ್ನೂ ಎಳೇ ಮರಿ. ಎಲ್ಲೆಂದರಲ್ಲಿ ಗಲೀಜು ಮಾಡುತ್ತಿತ್ತು. ಊಟದ ತಟ್ಟೆ ಬೀಳಿಸುತ್ತಿತ್ತು. ಮಂಚದ ಮೇಲೆ ಹಾಕಿದ ಬೆಡ್ ಶೀಟ್, ಸೋಫಾ ಕವರ್ ಎಲ್ಲವನ್ನೂ ಕಿತ್ತು ಹರಿದು ಹಾಕುತ್ತಿತ್ತು. ಹಲ್ಲು ಬರುವ ಕಾರಣ, ಮನೆಯ ಯಾವ ಸಾಮಾನೂ ಅದಕ್ಕೆ ಸಿಗುವ ಹಾಗೆ ಇಡೋಕಾಗ್ತಿರಲಿಲ್ಲ. ಎಲ್ಲವನ್ನೂ ಕಚ್ಚಿ ಹಾಕುತ್ತಿತ್ತು.

ಸ್ನೂಪಿಯನ್ನು ತಂದು ಎರಡೇ ದಿನಕ್ಕೆ ಪ್ರಶಾಂತ ಕೆಲಸದ ಮೇಲೆ ಹೈದರಾಬಾದಿಗೆ ಹೋದ. ಅಷ್ಟು ತುಂಟ ನಾಯಿಮರಿಯನ್ನು ನೋಡಿಕೊಳ್ಳುವ ಹೊತ್ತಿಗೆ ಪ್ರಿಯಾ ಹೈರಾಣಾಗಿದ್ದಳು.

‘ಅದಿನ್ನೂ ಪುಟ್ಟ ಮರಿ. ಕಟ್ಟಿ ಹಾಕ್ಬೇಡಿ ಪ್ಲೀಸ್, ಓಡಾಡಲಿ ಮನೆಯೊಳಗೆ’ ನಾಯಿಮರಿ ಕೊಟ್ಟ ಮನೆಯವಳು ಅದನ್ನು ಮುದ್ದಿಸುತ್ತಾ ಮಡಿಲಿಗಿಟ್ಟಿದ್ದಳು. ಪುಟ್ಟಮರಿಯನ್ನು ಕಟ್ಟಿ ಹಾಕಿದರೆ ಪ್ಯಾನಿಕ್ ಆಗತ್ತೆ, ಬಿಟ್ಟುಬಿಡೋಣ ಎಂದು ಮನೆಯೊಳಗೆ ಬಿಟ್ಟಿದ್ದಳು ಪ್ರಿಯಾ. ಅದರ ಆರ್ಭಟಗಳನ್ನು ನೋಡುತ್ತಾ ಇದ್ದಂತೆ, ಸ್ನೂಪಿ ಬಚ್ಚಲಿಂದ ನೀರು ತುಂಬಿದ್ದ ಚೆಂಬನ್ನು ಕಚ್ಚಿ ಓಡಿ ತಂದು ಬೆಡ್ ರೂಮಿನಲ್ಲಿದ್ದ ಬುಕ್ ಶೆಲ್ಫಿನ ಮುಂದೆ ಹೊತ್ತು ಹಾಕಿತ್ತು. ತಲೆ ಕೆಟ್ಟು ಪ್ರಶಾಂತನಿಗೆ ಫೋನ್ ಮಾಡಿದ್ದಳು.

‘ನೋಡ್ಕೊಳೋ ಹಾಗಿದ್ದರೆ ನಾಯಿ, ನರಿ ಎಲ್ಲಾದೂ ತೊಗೊಂಡು ಬಾ, ಕತ್ತೆ ಚಾಕರಿ ಮಾಡಿ ಮಾಡಿ ನಂಗೂ ಸಾಕಾಗಿದೆ, ತಂದಮೇಲೆ ಇದ್ದು ನೋಡ್ಕೊಬೇಕು ಅನ್ನೋ ಜವಾಬ್ದಾರಿ ಬೇಡ್ವಾ, ಮೊದಲು ವಾಪಸ್ ಕೊಡು ಇದನ್ನ’.

‘ಸರಿ ಬಿಡು, ನಾಡಿದ್ದು ನಾನು ಬಂದ ಕೂಡಲೇ ವಾಪಸ್ ಕೊಡ್ತೀನಿ’ ಅಂದ.



‘ಕರ್ಮ ನಂದು, ಬರೀ ಇದರ ಸೇವೆ ಮಾಡೋದೇ ಆಗಿದೆ’ ಎಂದು ಫೋನ್ ಕುಕ್ಕಿ ಧುಮುಗುಡುತ್ತಾ ಕೂತವಳಿಗೆ ಒಂದು ಹತ್ತು ನಿಮಿಷ ಬಿಟ್ಟು ನಾಯಿಯ ಶಬ್ದ ಯಾಕೋ ಕೇಳಿಸುತ್ತಿಲ್ಲ ಎಂದು ಹೊಳೆಯಿತು. ಮನೆಯೆಲ್ಲ ಸ್ನೂಪೀ... ಸ್ನೂಪಿ... ಎಂದು ಹುಡುಕಾಡಿದರೆ, ಬಚ್ಚಲು ಮನೆಯಲ್ಲಿ ಒಗೆಯುವ ಬಟ್ಟೆ ನೆನೆಸಿಟ್ಟ ಬಕೀಟಿನ ಹಿಂದೆ